# ಬೆಂಗಳೂರಿಗೆ ಬರಲು ಒಲ್ಲೆ ಎನ್ನುವ ಡೆಬ್ರಾ



ಕೀನ್ಯಾದಿಂದ ಬಂದ ಡೆಬ್ರಾ ಒಗಿಲಾ

ಭಾರತೀಯ ಸಂಸ್ಕೃತಿ, ಸ್ನೇಹಸೌರಭ ಎಂಥವರನ್ನೂ ಸೆಳೆಯುತ್ತವೆ. ಶಿಕ್ಷಣ, ಸಂಶೋಧನೆ, ಉದ್ಯೋಗಕ್ಕಾಗಿ ಇಲ್ಲಿಗೆ ಬಂದಿರುವ ವಿದೇಶಿಗರಿಗೆ ಈ ದೇಶದ ಪ್ರೇಕ್ಷಣೀಯ ತಾಣಗಳು, ಭಾಷೆ, ಆಚಾರವಿಚಾರ, ಆಹಾರ ಪದ್ಧತಿ ಎಲ್ಲವೂ ವೈವಿಧ್ಯಮಯ ಅನುಭವ ನೀಡುತ್ತವೆ. ಮೈಸೂರಿನ ಮಹಾಜನ ಕಾಲೇಜಿನ ಬಿ.ಎ (ಪತ್ರಿಕೋದ್ಯಮ) ಅಂತಿಮ ವರ್ಷದ ವಿದ್ಯಾರ್ಥಿನಿ ಡೆಬ್ರಾ ಒಗಿಲಾ ಅವರು ಭಾರತೀಯರನ್ನು 'ಸ್ನೇಹ ಸಂಪನ್ನರು' ಎಂದೇ ಬಣ್ಣಿಸುತ್ತಾರೆ.

ಡೆಬ್ರಾ ಅವರು ಕೀನ್ಯಾ ದೇಶದವರು. ಪ್ರಾಥಮಿಕ ಮತ್ತು ಪ್ರೌಢಶಾಲಾ ವ್ಯಾಸಂಗವನ್ನು ಕೀನ್ಯಾದಲ್ಲಿ ಮುಗಿಸಿ, ಇಲ್ಲಿ ಉನ್ನತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿಯೇ ಸ್ನಾತಕೋತ್ತರ ಪದವಿ ಅಧ್ಯಯನದ ಗುರಿ ಇಟ್ಟುಕೊಂಡಿದ್ದಾರೆ. ಶಿಕ್ಷಕರ ಪಾಠ, ಸ್ನೇಹಿತರ ಒಡನಾಟ ಎಲ್ಲವೂ ಬಹಳ ಇಷ್ಟವಾಗಿವೆ.

ಕೇರಳ, ಗೋವಾ, ರಾಜಸ್ಥಾನ ರಾಜ್ಯಗಳಲ್ಲಿ ಪ್ರವಾಸ ಮಾಡಿದ್ದಾರೆ. ಕೇರಳದ ಅರಣ್ಯ, ಗೋವಾದ ಸಮುದ್ರ ತೀರ, ಜೈಪುರ ಮತ್ತು ಉದಯಪುರದಲ್ಲಿನ ಅರಮನೆಗಳು, ಮೈಸೂರಿನ ಮೃಗಾಲಯ, ಕೃಷ್ಣರಾಜಸಾಗರ (ಕೆಆರ್‌ಎಸ್) ಇವೆಲ್ಲವೂ ಬಹಳ ಇಷ್ಟವಾಗಿವೆ. ಆದರೆ, ಬೆಂಗಳೂರು ಮಾತ್ರ ವರ್ಜ್ಯ. ಈ ಸಿಲಿಕಾನ್ ನಗರದ ದಟ್ಟಣೆ ಅವರಲ್ಲಿ ಬೆರಗು ಮೂಡಿಸಿದೆ. ಅಲ್ಲದೆ ಭಾರತೀಯರ ಕುಟುಂಬ ವ್ಯವಸ್ಥೆ, ಒಂದಾಗಿ ಬಾಳುವ ಗುಣ, ಹೊಂದಾಣಿಕೆ ಸ್ವಭಾವ, ಸಹಾಯ ಮನೋಭಾವಗಳು ಅವರಿಗೆ ಖುಷಿ ಮೂಡಿಸಿದೆ.

'ಕೀನ್ಯಾದಲ್ಲಿ ಕುಟುಂಬ, ಬಾಂಧವ್ಯ ಬೆಸುಗೆ ಇಲ್ಲ. ಒಬ್ಬೊಬ್ಬರು ಒಂದೊಂದು ಕಡೆ ವಾಸಿಸುತ್ತಾರೆ. ಅಪ್ಪ, ಅಮ್ಮ, ಮಕ್ಕಳು . ಮೊಮ್ಮಕ್ಕಳೆಲ್ಲ ಒಂದೇ ಮನೆಯಲ್ಲಿ ಇರುವ ವ್ಯವಸ್ಥೆ ಇಲ್ಲ' ಎಂದು ಡೆಬ್ರಾ ಬೇಸರ ವ್ಯಕ್ತಪಡಿಸುತ್ತಾರೆ.

ಕಾದಂಬರಿ ಓದು, ಸಂಗೀತ, ಗಾಯನ, ನೃತ್ಯ ಇವು ಅವರ ಹವ್ಯಾಸಗಳು. ಮೈಸೂರು ವಿಶ್ವವಿದ್ಯಾನಿಲಯದ ಅಂತರರಾಷ್ಟ್ರೀಯ ಕೇಂದ್ರವು ಆಯೋಜಿಸಿದ್ದ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸಿ ಪ್ರತಿಭೆ ಪ್ರದರ್ಶಿಸಿದ್ದಾರೆ.

## ಆಹಾ ಬಟರ್ ಚಿಕನ್..!

ಇಲ್ಲಿನ ಬಿರಿಯಾನಿ, ಬಟರ್ ಚಿಕನ್, ಪರೋಟಾ ಎಂದರೆ ಅವರಿಗೆ ಪಂಚಪ್ರಾಣ. ಮನೆಯಲ್ಲಿ ಸ್ವತಃ ಭಕ್ಷ್ಯಗಳನ್ನು ಸಿದ್ಧಪಡಿಸುತ್ತಾರೆ. ಹೋಟೆಲ್ ತಿನಿಸು ಎಂದರೆ ಅವರಿಗೆ ಅಷ್ಟಕ್ಕಷ್ಟೇ. ಹೀಗಾಗಿ ಅಡುಗೆ ಕಲಿತಿದ್ದಾರೆ. ಮನೆಯಲ್ಲಿ ಇಷ್ಟವಾದದ್ದನ್ನು ಮಾಡಿಕೊಂಡು ತಿನ್ನುತ್ತಾರೆ.

ಸಂಗೀತದಲ್ಲಿ ಡಿಪ್ಲೊಮಾ ಕೋರ್ಸ್ ಮಾಡುವ ಆಸೆಯೂ ಇವರಿಗಿದೆ. ವ್ಯಾಸಂಗ ಮುಗಿಸಿದ ಬಳಿಕ ವಿದ್ಯುನ್ಮಾನ ಮಾಧ್ಯಮದಲ್ಲಿ ಉದ್ಯೋಗಕ್ಕೆ ಸೇರುವ ಕನಸು ಇಟ್ಟುಕೊಂಡಿದ್ದಾರೆ. ಅದಕ್ಕಾಗಿ ಸಿದ್ಧತೆಯನ್ನು ನಡೆಸಿದ್ದಾರೆ. ಸ್ವಂತ ಜಾಹೀರಾತು ಸಂಸ್ಥೆಯೊಂದನ್ನು ಕಟ್ಟುವ ಗುರಿಯನ್ನೂ ಇಟ್ಟುಕೊಂಡಿದ್ದಾರೆ.

'ವೈದ್ಯಕೀಯ ವಿಜ್ಞಾನ, ಎಂಜಿನಿಯರಿಂಗ್, ಕಾನೂನು, ಪತ್ರಿಕೋದ್ಯಮ ಮತ್ತು ಸಮೂಹ ಸಂವಹನಗಳಂಥ ಕೋರ್ಸ್‌ಗಳ ಅಧ್ಯಯನಕ್ಕೆ ಕೀನ್ಯಾದಲ್ಲಿ ಅವಕಾಶಗಳು ಕಡಿಮೆ ಇವೆ. ಉನ್ನತ ಶಿಕ್ಷಣದಲ್ಲಿ ಶುಲ್ಕ ಇಲ್ಲಿಗಿಂತ ದುಪ್ಪಟ್ಟು ಇದೆ. ಹೀಗಾಗಿ, ಬಹಳಷ್ಟು ಮಂದಿ ಉನ್ನತ ವ್ಯಾಸಂಗಕ್ಕೆ ಭಾರತವನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಭಾರತದಲ್ಲಿ ಶಿಕ್ಷಣ ಗುಣಮಟ್ಟ, ಪಠ್ಯಕ್ರಮ, ಬೋಧನೆ ಚೆನ್ನಾಗಿದೆ' ಎಂಬುದು ಅವರ ಅಭಿಪ್ರಾಯ.

ಗೆಳೆಯ–ಗೆಳತಿಯರೊಂದಿಗೆ ಕಾಲ ಕಳೆಯುವುದು ಇಷ್ಟ. ಕಾಲೇಜಿನ ಸಾಂಸ್ಕೃತಿಕ ಕಾರ್ಯಕ್ರಮ, ಸ್ಪರ್ಧೆ, ಆಟೋಟಗಳು ಹಿಡಿಸಿವೆ. ಆದರೆ, ಯಾರಾದರೂ ಕಪ್ಪು ಬಣ್ಣದವರು ಎಂದು ಹೀಯಾಳಿಸಿದರೆ, ಡೆಬ್ರಾ ಹೆಸರನ್ನು 'ಡೆಬ್ರಿಸ್' ವ್ಯಂಗ್ಯ ಧಾಟಿಯಲ್ಲಿ ಹೇಳಿದರೆ ಮನಸ್ಸಿಗೆ ಯಾತನೆಯಾಗುತ್ತದಂತೆ. ಇಂಥ ಅನುಭವಗಳು ಆಗಿವೆಯಂತೆ.

ವ್ಯಾಸಂಗ ಮುಗಿಸಿದ ನಂತರ ಕೀನ್ಯಾಕ್ಕೆ ವಾಪಸ್ಸಾಗಿ ಅಲ್ಲಿ ಕೆಲಸ ಮಾಡುವ ಉದ್ದೇಶ ಹೊಂದಿದ್ದಾರೆ. ಆದರೆ, ಒಂದು ವೇಳೆ ಭಾರತದಲ್ಲಿಯೇ ಇರಲು ಅವಕಾಶ ಸಿಕ್ಕರೆ ಅದಕ್ಕೂ ಸೈ ಅಂತೆ.

'ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಸಹೋದರಿ ಕಾನೂನು ಪದವಿ ಪಡೆದಿದ್ದಾರೆ. ಭಾರತದಲ್ಲಿ ವ್ಯಾಸಂಗ ಮಾಡಲು ಅವರೇ ಪ್ರೇರಣೆ. ಪತ್ರಿಕೋದ್ಯಮ ಕೋರ್ಸ್ ಮಾಡಿದವರಿಗೆ ಕೀನ್ಯಾದಲ್ಲಿ ಉತ್ತಮ ಅವಕಾಶಗಳು ಇವೆ. ಮಾಧ್ಯಮ ಕ್ಷೇತ್ರದಲ್ಲಿ ಸವಾಲು ಮತ್ತು ನಿರಂತರ ಹೊಸತನ ಇರುತ್ತದೆ. ಹೀಗಾಗಿ, ಈ ಕೋರ್ಸ್ ಆಯ್ಕೆ ಮಾಡಿಕೊಂಡಿದ್ದೇನೆ. ಮೈಸೂರಿನಲ್ಲಿ ಅಧ್ಯಯನಕ್ಕೆ ಅವಕಾಶ ಸಿಕ್ಕಿದ್ದು ಪುಣ್ಯ. ಭಾರತ ಒಂದು ಸುಂದರ ದೇಶ' ಎಂದು ಡೆಬ್ರಾ ಹೇಳುತ್ತಾರೆ.

■ ಧನ್ಯಪ್ರಸಾದ್ ಬಿ.ಜೆ.